Publication : Vijayavani
Date: June 17, 2014
Page No: 12
Edition: All

SARA Media Net
Simply communicate...



ವಿಜಯವಾಣಿ
ಉಲ್ಲಾಸ
12 c ಮಂಗಳವಾರ 17 ಜೂನ್ 2014 BANGALORE

ಭಾವನಾ ತರಂಗ

2012ರ ಜೂನ್‌ನಲ್ಲಿ ಬಿಡುಗಡೆಯಾದ 'ಭಾಗೀರತಿ'ಯೇ ಕೊನೆ... ಆ ಬಳಿಕ ಭಾವನಾ ಬೆಳ್ಳಿತೆರೆಯ ಮೇಲೆ ಪ್ರೇಕ್ಷಕರಿಗೆ ದರ್ಶನ ಭಾಗ್ಯ ಕೊಟ್ಟಿಲ್ಲ. ಇದೀಗ ಪುನಃ ಸಿನಿಮಾದತ್ತ ಮುಖ ಮಾಡಿದ್ದಾರೆ ಭಾವನಾ. ಗಿರೀಶ್ ಕಾಸರವಳ್ಳಿ ಪುತ್ರ ಅಪೂರ್ವ ಕಾಸರವಳ್ಳಿ ನಿರ್ದೇಶನದ ಚೊಚ್ಚಲ ಚಿತ್ರ 'ನಿರುತ್ತರ'ದಲ್ಲಿ ಭಾವನಾ ನಟಿಸಲಿದ್ದಾರೆ. ಆ ಸಂದರ್ಭದಲ್ಲಿ 'ವಿಜಯವಾಣಿ' ಜೊತೆ ಮಾತಿಗೆ ಸಿಕ್ಕ ಅವರು ಫಟಾಫಟ್ ಉತ್ತರವಾದರು.

# ರಕ್ತ ಅಂದ್ರೆ ನಂಗೆ ಆಗಿಬರೋಲ್ಲ...

■ ಕ. ವೀರೇಶ್

● **ಸಿನಿಮಾದಿಂದ ದೂರವಾಗಿಬಿಟ್ಟಿದ್ದೀರಿ?**
ನಾನು ಯಾವತ್ತೂ ಚಿತ್ರರಂಗದ ಭಾಗವಾಗಿಯೇ ಇದ್ದೇನೆ. ಬಾಲ್ಯಾವಸ್ಥೆ, ಪ್ರೌಢಾವಸ್ಥೆಯಿಂದ ಶುರುವಾಗಿ ಈಗಿನ ಅವಸ್ಥೆವರೆಗೂ ಕಲೆಯ ಕಡೆಗೇ ನನ್ನ ಆಸಕ್ತಿ. ಅಮ್ಮ ತೀರಿಕೊಂಡ ಮೇಲೆ ಕೌಟುಂಬಿಕ ಜವಾಬ್ದಾರಿ ಜಾಸ್ತಿಯಾಗಿದೆ. ಅದೂ ಅಲ್ಲದೇ, ಈ ನಟಿಯರಿಗೆಲ್ಲಾ ಕೊಡ್ತಾರಲ್ಲ... ನಂ.1, ನಂ. 2 ಅಂಕಿಗಳು; ಇವುಗಳ ಚೌಕಟ್ಟಿನಲ್ಲಿ ನಾ ಬರೋದಿಲ್ಲ. ನನಗೆ ನನ್ನದೇ ಆದ ನಿಲುವುಗಳಿವೆ. ಈ ನಿಲುವುಗಳೇ ಬೇರೆಯವರಿಗೆ ನ್ಯೂನತೆಯಾಗಿ ಕಾಣಿಸಬಹುದು. ನನ್ನ ಮಟ್ಟಿಗೆ ಅದು ಸಕಾರಾತ್ಮಕ ನ್ಯೂನತೆ. ಅನುಭವಿ ನಟಿ ಅಂದಮೇಲೆ ತಂತಾನೇ ಒಂದು ಸಾಮಾಜಿಕ ಜವಾಬ್ದಾರಿ ಬಂದುಬಿಡುತ್ತೆ. ಈಗ ನನಗೆ ಆ ಜವಾಬ್ದಾರಿ ಭಾವ ಜಾಸ್ತಿಯಾಗುತ್ತಿದೆ.

● **ನ್ಯೂನತೆ ಅಂದರೆ ಹೇಗೆ? ಬಿಡಿಸಿ ಹೇಳಿ...**
ಉದಾಹರಣೆಗೆ, ನಾನು ರೌಡಿಸಂ ಸಿನಿಮಾಗಳಲ್ಲಿ ನಟಿಸಬಾರದು ಅಂತ ನಿರ್ಧಾರ ಮಾಡಿದ್ದೇನೆ. ಕಳೆದ ವರ್ಷ ನನ್ನ ನೆಚ್ಚಿನ ನಟನೊಬ್ಬನ ಚಿತ್ರ ನೋಡಿದೆ; ಭರವಸೆಗಳೆಲ್ಲಾ 'ಪುಡಿ'ಪುಡಿಯಾದವು! ರಕ್ತ ಕಂಡ್ರೆ ನಂಗೆ ಆಗಿಬರಲ್ಲ. ಆ ಕಾರಣಕ್ಕೇ ಲೆಕ್ಕವಿಲ್ಲದಷ್ಟು ಅವಕಾಶಗಳು ಕೈತಪ್ಪಿಹೋದವು. ಅದರ ಬಗ್ಗೆ ನನಗೇನೂ ಬೇಸರ ಇಲ್ಲ. 'ರಕ್ತಪಾತದ ವಿರೋಧಿ'ಯಾಗಿ ನನ್ನ ನಿಲುವಿಗೆ ಈಗಲೂ ಬದ್ಧ. ಇಂಥ ಇನ್ನೂ ಹಲವು ನಿಲುವುಗಳಿವೆ... ಎಲ್ಲವನ್ನೂ ಹಂತಹಂತವಾಗಿ ಹೇಳ್ತೀನಿ.

● **ರಾಜಕೀಯದಲ್ಲಿ ನಿಮ್ಮ ಮಹತ್ವಾಕಾಂಕ್ಷೆ ಈಗಲೂ ಮೊದಲಿನಂತೆ ಇದೆಯೇ?**
ಹೌದು. ಕಾಂಗ್ರೆಸ್‌ನಂಥ ಪಕ್ಷ ಸುಮ್ಮನೆ ಯಾರ್‍ಯಾರಿಗೋ ಸದಸ್ಯತ್ವ ಕೊಡೋದಿಲ್ಲ. ಅದೊಂದು ದೊಡ್ಡ ಗೌರವ. ಮೇಲಾಗಿ, ಎಲ್ಲಾ ತಲೆಮಾರುಗಳಲ್ಲೂ ಆ ಪಕ್ಷ ಮಹಿಳೆಯರಿಗೆ ಪ್ರಾಶಸ್ತ್ಯ ನೀಡುತ್ತ ಬಂದಿದೆ. ಇಲ್ಲಿ ವೈಯಕ್ತಿಕ ಹಿತಾಸಕ್ತಿಗಳಿಗಿಂತ ಸಾಮಾಜಿಕ ಬದ್ಧತೆ ಮುಖ್ಯ. ಪಕ್ಷ ಯಾವುದೇ ಸ್ಥಾನಮಾನ ಕೊಡಲಿ ಬಿಡಲಿ. ಕೈಲಾದ ಮಟ್ಟಿಗೆ ಜನಸೇವೆ ಮಾಡಬೇಕು, ಅದೇ ನನ್ನ ಧ್ಯೇಯ. ಚುನಾವಣೆ ಪ್ರಚಾರ ವೇಳೆ 'ಸ್ಟಾರ್' ಸಮ್ಮಾನವೂ ಸಿಕ್ಕಿತು, ಜೊತೆಗೆ ನಿಜವಾದ ರಾಜಕೀಯದ ಒಳಸುಳಿಗಳೂ ಅರ್ಥವಾದವು.

● **ನಿಮ್ಮ ಸಹೋದರ ಅರವಿಂದ್ ಈಗ 'ನಿರುತ್ತರ' ಮೂಲಕ ನಿರ್ಮಾಪಕರಾಗುತ್ತಿದ್ದಾರೆ. ಭವಿಷ್ಯದಲ್ಲಿ ನೀವೂ...**
ಇಲ್ಲಪ್ಪ... ನನ್ನ ಕೈಯಲ್ಲಿ ದುಡ್ಡು ನಿಲ್ಲೋದಿಲ್ಲ. ನನ್ನ ವ್ಯಾನಿಟಿ ಬ್ಯಾಗ್ ಬೇಕಾದ್ರೆ ಚೆಕ್ ಮಾಡಿ, ಅದರಲ್ಲಿ 100 ರೂ.ಗಿಂತ ಜಾಸ್ತಿ ನಿಮಗೆ ಸಿಗೋದಿಲ್ಲ. ದುಡ್ಡು ಎಣಿಸೋದು ಅಂದ್ರೆ ನಂಗೆ ಯಾವಾಗ್ಲೂ ಭಯ!

● **ಇನ್ನೇನು ವಿಶೇಷ?**
ಕುವೆಂಪು ಅವರ 'ನೆನಪಿನ ದೋಣಿಯಲ್ಲಿ' ಆತ್ಮಕಥೆ ಓದುತ್ತಿರುವೆ. ಅದ್ಭುತ ಅನುಭವವಾಗುತ್ತಿದೆ! ಉಳಿದಂತೆ, ಇತಿಹಾಸವನ್ನು ನಾ ಜಾಸ್ತಿ ಓದ್ತೀನಿ. ಇತಿಹಾಸ ಗೊತ್ತಿರುವವರ ವರ್ತಮಾನ ಚೆನ್ನಾಗಿರುತ್ತೆ- ಅಲ್ವಾ?!

ಫಟಾ ಫಟ್ ಮಾತು

# 70, Samruddhi, 1st Main, 2nd Block, Ayyappanagar, K. R. Puram, Bangalore – 560 036
Telefax : 080 25619525 Mobile : 094482 21565, 094489 02288
E-mail : saramedianet@gmail.com, amrithjogi@gmail.com
**www.saramedianet.com**